(ಇಂದು ದಿನಾಂಕಃ 20–06–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀಮತಿ ಎಸ್ ಎಸ್ ಎಸ್ ವಕೀಲರಿಂದ ಃ-

1) ವಾದ ಪತ್ರದಲ್ಲಿ ವಂಶಾವಳಿಯನ್ನು ನಮೂದು ಮಾಡಿಲ್ಲ. ನಮೂದು ಮಾಡಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿ ಅವರ ವಂಶಾವಳಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಯರ ವಂಶಾವಳಿ ನನಗೆ ಗೊತ್ತಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಹಾಗೂ ವಾದ ಪತ್ರದಲ್ಲಿ ಬರೆದಿರುವ ವಿಷಯದ ಬಗ್ಗೆ ನನಗೆ ಮಾಹಿತಿ ಇಲ್ಲಾ ಎಂದರೆ ಸಾಕ್ಷಿಯು ಯಾವುದೇ ಸಂಮಜಸವಾದ ಉತ್ತರ ನೀಡುತ್ತಿಲ್ಲ.

2) ಚಂದ್ರಶೇಖರಪ್ಪ ಮಹಾದೇವಪ್ಪ ಕುಲಕರ್ಣಿ ಮತ್ತು ವೀರಪ್ಪ ಮಹಾದೇವಪ್ಪ ಕುಲಕರ್ಣಿ ರವರ ವಾರಸಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿಲ್ಲ. ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲಾ ಎಂದರೆ ಸರಿ. ದಾವಾ ಆಸ್ತಿಯು 71/3 ಕ್ಷೇತ್ರ 03 ಎಕ್ರೆ 32 ಗುಂಟೆ ಇರುತ್ತದೆ. ಸಾಕ್ಷಿಗೆ ಈಗ ನಿಪಿ–12 ರ 2 ನೇ ಪುಟವನ್ನು ತೋರಿಸಿ ಅದರಲ್ಲಿ ನಾನು ಹೇಳಿದ ಆಸ್ತಿಯು ಗುರುಶಾಂತವ್ವ ತಂದೆ ಮಾಹದೇವಪ್ಪ ಕುಲಕರ್ಣಿ ರವರಿಗೆ ಹೋಗಿರುತ್ತದೆ ಎಂದು ನುಡಿಯುತ್ತಾರೆ. ಅದರಲ್ಲಿ ಸರ್ವೆ ಸಂಖ್ಯೆಯು 71/2 ಎ+2 ಬಿ/2+3+4 ಎಂದು ನಮೂದು ಇರುತ್ತದೆ.

3) ನಿಪಿ–12 ರ ವರದಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಸಾಕ್ಷಿಗೆ ಈಗ ತಾವು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲು ನೀಡಿ, ಅದರಲ್ಲಿ ವಾಟನಿ ಪತ್ರದ ನಕಲು ಪ್ರತಿ ತೋರಿಸಲು ಕೇಳಿ, ಸಾಕ್ಷಿಯು ನಿಪಿ–13 ನ್ನು ತೋರಿಸುತ್ತಾರೆ. ನಿಪಿ–13 ರ ಎಡಭಾಗದಲ್ಲಿ ತಕರಾರು ಬಂದಿದೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ನಿಪಿ–13 ತಹಶೀಲ್ದಾರ ರವರಿಂದ ಮಾನ್ಯತೆ ಪಡೆದಿಲ್ಲ ಎಂದರೆ ಸರಿ. ಡ ಸಂಖ್ಯೆ 2378 ತಹಶೀಲ್ದಾರ ರವರಿಂದ ಮಾನ್ಯತೆ ಪಡೆದಿಲ್ಲ ಎಂದರೆ ಸರಿ.

4) ಸರ್ವೆ ಸಂಖ್ಯೆ 71/2 ಎ+2 ಬಿ/2+3+4 ಇಲ್ಲಿಯವರೆಗೆ ಗದಿಗೆಪ್ಪ ಫಕ್ಕೀರಪ್ಪ ಕುಲಕರ್ಣಿ ರವರ ವಾರಸುದಾರರ ಕಬ್ಜಾ ವಹಿವಾಟಿನಲ್ಲಿರುತ್ತದೆ ಎಂದರೆ ಸಾಕ್ಷಿಯು ಅದರಲ್ಲಿ ಈಗ ಹಿಸ್ಸೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯಲ್ಲಿ ಹಿಸ್ಸೆಯಾದ ಬಗ್ಗೆ ಉತಾರಗಳನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿಗೆ ಈಗ ತಾವು ಸಲ್ಲಿಸಿದ ದಾಖಲೆಗಳನ್ನು

ತೋರಿಸಿ ಸಾಕ್ಷಿಯು ಅದರಲ್ಲಿ ನಿಪಿ–19 ನ್ನು ಗುರುತಿಸುತ್ತಾರೆ. ನಿಪಿ–19 ಸರ್ವೆ ಸಂಖ್ಯೆ 71/3 ಕ್ಕೆ ಸಂಬಂದ ಪಟ್ಟಿದ್ದು ಅದು ನನ್ನ ಸಹೋದರರ ಕಬ್ಜೆಯಲ್ಲಿ ಇರುತ್ತದೆ. ಸರ್ವೆ ಸಂಖ್ಯೆ 71/3 ಮೂಲತಃ ನನ್ನ ಅಜ್ಜನವರು ಖರೀದಿ ಪಡೆದಿರುತ್ತಾರೆ. ನನ್ನ ಅಜ್ಜನವರು ಖರೀದಿ ಪಡೆದ ಬಗ್ಗೆ ನಿಪಿ–10 ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.

5) ನಿಪಿ–10 ರಲ್ಲಿ ಸರ್ವೆ ಸಂಖ್ಯೆ 71/2 ಅ+2 ಬ/2+3 ನಮೂದು ಆಗಿರುತ್ತದೆ. ನಿಪಿ–10 ಸರ್ವೆ ಸಂಖ್ಯೆ 71/3 ಕ್ಕೆ ಸಂಬಂದ ಪಟ್ಟದ್ದು ಅಲ್ಲ ಅಂದರೆ ಸರಿಯಲ್ಲ. ಸರ್ವೆ ಸಂಖ್ಯೆ 71/3 ಕ್ಕೆ ಸೇರಿದ ಖರೀದಿ ಪತ್ರವನ್ನು ಹಾಜರು ಪಡಿಸಿಲ್ಲ ಅದಕ್ಕೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ನಿಪಿ–19 ನ್ನು ತೋರಿಸಿ ಅದರಲ್ಲಿ ಈರವ್ವ ಕೋಂ ಗಡಿಯಪ್ಪಗೌಡ ಎಂದು ನಮೂದು ಇರುತ್ತದೆ ಅದು ಹೇಗೆ ನಮೂದು ಆಗಿರುತ್ತದೆ ಎಂದು ಕೇಳಲಾಗಿ ಸಾಕ್ಷಿಯು ಈ ಹಿಂದೆ ಉತಾರಗಳಲ್ಲಿ ಅವರ ಹೆಸರು ಇಲ್ಲದೇ ಇದ್ದು ಗಣಕೀಕೃತ ಮಾಡುವ ಸಮಯದಲ್ಲಿ ಅದು ತಪ್ಪಾಗಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ಈರವ್ವ ಕೋಂ ಗಡಿಯಪ್ಪಗೌಡ ರವರ ಹೆಸರು ಕಡಿಮೆ ಮಾಡಿಸಲು ನನ್ನ ತಂದೆಯವರು ತಹಶೀಲ್ದಾರ ನ್ಯಾಯಾಲಯದಲ್ಲಿ ಪ್ರಯತ್ನ ಪಟ್ಟಿರುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ.

6) ಈರವ್ವ ಕೋಂ ಗಡಿಯಪ್ಪಗೌಡ ರವರ ತಂದೆಯ ಹೆಸರು ಗೊತ್ತಿಲ್ಲ. ಈರವ್ವ ರವರು ನಮ್ಮ ಕುಟುಂಬಕ್ಕೆ ಸೇರಿದವರು ಅಲ್ಲ. ಈರವ್ವ ಕೋಂ ಗಡಿಯಪ್ಪಗೌಡ ನನ್ನ ಅಜ್ಜನ ಸಂಬಂದಿಯಾಗಿರಬಹುದು. ನನ್ನ ಅಜ್ಜ ಮಹಾದೇವಪ್ಪ. ಮಹಾದೇವಪ್ಪ ಮತ್ತು ಗದಿಗೆಪ್ಪ ಕುಲಕರ್ಣಿ ಬೇರೆ ಬೇರೆ ಕುಟುಂಬ ಹಾಗೂ ರಕ್ತ ಸಂಬಂದ ಇರುವುದಿಲ್ಲ ಎಂದರೆ ಸರಿ. ಮಹಾದೇವಪ್ಪ ಮತ್ತು ಗದಿಗೆಪ್ಪ ಕುಲಕರ್ಣಿರವರಿಗೆ ಯಾವುದೇ ರೀತಿಯ ರಕ್ತ ಹಾಗೂ ಸೋದರ ಸಂಬಂದ ಇಲ್ಲದೇ ಇದ್ದ ಕಾರಣ ಸದರಿಯವರಲ್ಲಿ ಗದಿಗೆಪ್ಪ ಕುಲಕರ್ಣಿ ರವರು ತಕರಾರು ಮಾಡಿದ ಕಾರಣ ಡ ಸಂಖ್ಯೆ 2378 ರಲ್ಲಿ ತಕರಾರು ಎಂದು ನಮೂದಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ಸಂಖ್ಯೆ 71/2 ಎ+2 ಬಿ/2+3+4 ಇಲ್ಲಿಯವರೆಗೆ ಗದಿಗೆಪ್ಪ ಕುಲಕರ್ಣಿ ರವರ ವಾರಸುದಾರರ ಕಬ್ಜೆಯಲ್ಲಿ ಇರುತ್ತದೆ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದು, ಅಂತಿಮ ಸಮಯವಕಾಶ ನೀಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**